# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 16.03.2022ರ ಬುಧವಾರದಂದು ಪೂರ್ವಾಹ್ನ 11-30 ಗಂಟೆಗೆ ಜರುಗಿದ ಸಿಂಡಿಕೇಟ್‌ನ ಎರಡನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಶ್ರೀ ಕೆ.ಸಿ.ವೀರಭದ್ರಯ್ಯ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,<br>ಪ್ರಾದೇಶಿಕ ಕಛೇರಿ, ಮೈಸೂರು.<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ<br>ಸರ್ಕಾರ ಇವರ ಪರವಾಗಿ | ಸದಸ್ಯರು |
| 3. | ಪ್ರೊ. ರಮೇಶ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಡಾ. ವೆಂಕಟೇಶಯ್ಯ | ಸದಸ್ಯರು |
| 7. | ಡಾ. ನಾಗರಾಜು | ಸದಸ್ಯರು |
| 8. | ಡಾ. ಗೋವಿಂದರಾಜು | ಸದಸ್ಯರು |
| 9. | ಡಾ. ಕೆ.ವಿ.ಸುರೇಶ | ಸದಸ್ಯರು |
| 10. | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 15. | ಪ್ರೊ. ಎ.ಪಿ.ಜ್ಞಾನಪ್ರಕಾಶ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 17. | ಡಾ. ಸಂಗೀತಾ ಗಜಾನನ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಡಾ. ಜಿ.ವೆಂಕಟೇಶ್ ಕುಮಾರ್, ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಡಾ. ಸೈಯದ್ ಕಾರ್ರು ಮೊಹಿದ್ದೀನ್. ಬೆಂಗಳೂರು
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಕಾವ್ಯವೇ ಜೀವನವೆಂದು ಬದುಕಿದ, ನಾಡಿನ ಅಗ್ರಗಣ್ಯ ಹಿರಿಯ ಸಾಹಿತ್ಯ ಲೋಕದ ಕೊಂಡಿ ನಾಡೋಜ ಡಾ. ಚನ್ನವೀರ ಕಣವಿ ಇವರು ದಿನಾಂಕ 16.02.2022 ರಂದು ನಿಧನರಾಗಿರುವುದರಿಂದ ಕರುನಾಡಿಗೆ ದೊಡ್ಡ ನಷ್ಟವಾಗಿದೆ.

ಕನ್ನಡದ ಹಿರಿಯ ನಟ ಕಲಾತಪಸ್ವಿ ಡಾ.ರಾಜೇಶ್ ರವರು ಕಿಡ್ನಿ ವೈಫಲ್ಯದಿಂದ ಅನಾರೋಗ್ಯ ಪೀಡಿತರಾಗಿ ಚಿಕಿತ್ಸೆ ಫಲಿಸದೇ ದಿನಾಂಕ 19.02.2022 ರಂದು ನಿಧನರಾಗಿರುವುದು ನಮ್ಮ ಕರುನಾಡಿಗೆ ದೊಡ್ಡ ನಷ್ಟವಾಗಿದೆ ಹಾಗೂ ರಷ್ಯಾ ಮತ್ತು ಉಕ್ರೇನ್ ನಡುವೆ ನಡೆದ ಯುದ್ಧ ಭೂಮಿಯಲ್ಲಿ ನಮ್ಮ ರಾಜ್ಯದ ಮೆಡಿಕಲ್ ವಿದ್ಯಾರ್ಥಿಯಾದ ಶ್ರೀ ನವೀನ್ ರವರು ಮೃತ ಪಟ್ಟಿರುವ ಹಿನ್ನೆಲೆಯಲ್ಲಿ, ಇವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷಗಳ ಕಾಲ ಮೌನಾಚರಣೆಯನ್ನು ಆಚರಿಸಲಾಯಿತು.

ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಡಾ. ಈ.ಗೋವಿಂದರಾಜು, ಪ್ರಾಂಶುಪಾಲರು, ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು ಇವರನ್ನು ಸ್ವಾಗತಿಸಿ ಸಭೆಗೆ ಪರಿಚಯಿಸಿದರು.

ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ. ಜಿ.ವೆಂಕಟೇಶ್ ಕುಮಾರ್, ಪ್ರಾಧ್ಯಾಪಕರು, ಮನಃಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸದರಿಯವರ ಅನುಪಸ್ಥಿತಿಯಲ್ಲಿ ಸ್ವಾಗತಿಸಿ ಸಭೆಗೆ ಪರಿಚಯಿಸಿದರು.

ಪ್ರೊ. ಜಿ.ವೆಂಕಟೇಶ್‌ಕುಮಾರ್‌ರವರನ್ನು ಸಿಂಡಿಕೇಟ್ ಸದಸ್ಯರಾಗಿ 2ನೇ ಬಾರಿಗೆ ನೇಮಕ ಮಾಡಿರುವುದನ್ನು ಶ್ರೀ ಎಸ್.ಡಿ.ದೊಡ್ಡಚಾರಿರವರು, ಡಾ.ಎಂ.ಎಸ್.ದಾಮೋಧರ್‌ರವರು ಶ್ರೀ ಎಂ.ಬಿ.ಗಪ್ಪಣ್ಣರವರು, ವಿರೋಧ ವ್ಯಕ್ತಪಡಿಸಿದರು.

ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ನಾವು ಬಂದ 2 ವರ್ಷಗಳಿಂದಲೂ ಯಾವ ಪ್ರೊಫೆಸರ್‌ಗಳನ್ನೂ ಒಂದು ವರ್ಷದ ಅವಧಿಗೆ ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಿರುವುದಿಲ್ಲ, ಈ ವರ್ಷ ಇವರನ್ನು ನೀವೇ ನಾಮನಿರ್ದೇಶನ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೀರಿ, ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆಯಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ. ಆದರೂ 2ನೇ ಬಾರಿಗೆ ತಾವು ನೇಮಕ ಮಾಡಿರುವುದನ್ನು ವಿರೋಧಿಸುತ್ತೇವೆ. ಹಿಂದೆ ಇದ್ದ ಶ್ರೀಮತಿ ಸಿಂಧು ಸುರೇಶ್ ರವರಿಗೂ 2ನೇ ಬಾರಿಗೆ ಆದೇಶ ಬಂದಿದ್ದರೂ ಯಾಕೆ ಅವರನ್ನು ವಾಪಸ್ ಕಳುಹಿಸಿದಿರಿ ಎಂದು ಪ್ರಶ್ನಿಸಿದರು.

ಪ್ರೊ. ರಮೇಶ್ ರವರು ಮಾತನಾಡಿ, ಶ್ರೀಮತಿ ಸಿಂಧು ಸುರೇಶ್‌ರವರು ಪ್ರೊಫೆಸರ್ ಅಲ್ಲ, ಪ್ರೊ. ಜಿ.ವೆಂಕಟೇಶ್‌ಕುಮಾರ್ ಪ್ರೊಫೆಸರ್, ಆದಕಾರಣ ಇಬ್ಬರ ಪ್ರಕರಣವನ್ನು ಹೋಲಿಕೆ ಮಾಡಬಾರದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆಯಂತೆ ಸದಸ್ಯರ ನೇಮಕಾತಿಗೆ ಹಿರಿಯ ಪ್ರಾಧ್ಯಾಪಕರ ಪಟ್ಟಿಯನ್ನು ಸಿದ್ಧಪಡಿಸಿ, ಜೇಷ್ಠತೆಯ ಆಧಾರದ ಪ್ರಕಾರ ಪ್ರೊ.ಮುಜಾಫರ್ ಅಸ್ಸಾದಿ ಹಾಗೂ ಪ್ರೊ. ಜಿ.ವೆಂಕಟೇಶ್‌ಕುಮಾರ್‌ರವರ ಹೆಸರನ್ನು ಸರ್ಕಾರಕ್ಕೆ ಕಳುಹಿಸಲಾಗಿತ್ತು. ರಾಜ್ಯ ಸರ್ಕಾರದ ಆದೇಶಾನುಸಾರ ಪ್ರೊ.ಜಿ.ವೆಂಕಟೇಶ್‌ಕುಮಾರ್‌ರವರನ್ನು ನೇಮಕ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಎಂ.ಎಸ್.ದಾಮೋದರ್‌ರವರು ಮಾತನಾಡಿ, ಹಾಗಾದರೆ ಹಿಂದೆ ಇದ್ದ ಹಿರಿಯ ಪ್ರಾಧ್ಯಾಪಕರುಗಳಿಗೂ 2ನೇ ಬಾರಿ ಸಿಂಡಿಕೇಟ್ ಸದಸ್ಯರಾಗುವ ಅವಕಾಶ ನೀಡಬೇಕಾಗಿತ್ತು ಅವರಿಗೆ ಯಾಕೆ ತಾವು ಅವಕಾಶ ಮಾಡಿಕೊಟ್ಟಿರುವುದಿಲ್ಲ, ಶ್ರೀಮತಿ ಸಿಂಧು ಸುರೇಶ್ ರವರರಿಗೂ 2ನೇ ಬಾರಿಗೆ ಆದೇಶ ಬಂದಿದ್ದರೂ ಯಾಕೆ ಅವರನ್ನು ವಾಪಸ್ ಕಳುಹಿಸಿದಿರಿ ಈಗ ಪ್ರೊ. ಜಿ.ವೆಂಕಟೇಶ್‌ಕುಮಾರ್‌ರವರಿಗೆ ಅವಕಾಶ ಮಾಡಿಕೊಡಲಾಗಿದೆ ಇದು ನಿಯಮ ಉಲ್ಲಂಘನೆಯಾಗಿದೆ ಎಂದು ತಿಳಿಸಿದರು.

ಶ್ರೀ ಎಂ.ಬಿ.ಗಪ್ಪಣ್ಣರವರು ಮಾತನಾಡಿ, ಮಾನ್ಯ ಕುಲಪತಿಯವರೇ ಪ್ರೊ. ಜಿ.ವೆಂಕಟೇಶ್‌ಕುಮಾರ್ ರವರ ಹೆಸರನ್ನು ಶಿಫಾರಸ್ಸು ಮಾಡಿ ಕಳುಹಿಸಿರುವ ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರ ಆದೇಶ ಹೊರಡಿಸಿರುತ್ತದೆ. ಅದರಂತೆ ತಾವು ನೇಮಕ ಮಾಡಿದ್ದೀರಿ ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಸರ್ಕಾರಕ್ಕೆ ಮತ್ತೊಮ್ಮೆ ಸ್ಪಷ್ಟವಾದ ನಿರ್ದೇಶನ ಕೋರಿ ಪತ್ರ ಬರೆಯಲು ಆಗ್ರಹಿಸಿದರು.

ಮಾನ್ಯ ಕುಲಪತಿಯವರು ಪ್ರತಿಕ್ರಿಯಿಸಿ, ಸರ್ಕಾರವು ಜೇಷ್ಠತಾ ಪಟ್ಟಿಯನ್ನು ಕಳುಹಿಸಿಕೊಡುವಂತೆ ಕೋರಿದ್ದು, ಅದರಂತೆ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಕಳುಹಿಸಿಕೊಡಲಾಗಿತ್ತು. ರಾಜ್ಯ ಸರ್ಕಾರವು ಜೇಷ್ಠತೆಯ ಆಧಾರದ ಮೇಲೆ ನಾಮನಿರ್ದೇಶನ ಮಾಡಿರುವ ಆದೇಶದಂತೆ ಪ್ರೊ. ಜಿ.ವೆಂಕಟೇಶ್‌ಕುಮಾರ್‌ರವರನ್ನು ಸಿಂಡಿಕೇಟ್ ಸದಸ್ಯರಾಗಿ ನೇಮಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಆದಾಗ್ಯೂ ಈ ವಿಷಯದ ಬಗ್ಗೆ ಮತ್ತೊಮ್ಮೆ ಸರ್ಕಾರಕ್ಕೆ ಸವಿವರವಾಗಿ ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗುವುದೆಂದರು.

ನಂತರ ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಡಾ. ರಾಜಣ್ಣ ಬಿ., ಪ್ರಾಂಶುಪಾಲರು, ಪಿ.ಎಲ್.ಎನ್. ಪ್ರಥಮ ದರ್ಜೆ ಕಾಲೇಜು, ಪೂರಿಗಾಲಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದ ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ಪೂರ್ವಭಾವಿ ಕಾರ್ಯಸೂಚಿ

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **ದಿನಾಂಕ : 01–02–2022ರಂದು ಜರುಗಿದ "ಮೊದಲನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.** | |
| ದಿನಾಂಕ 1.02.2022 ರಂದು ನಡೆದ ಸಿಂಡಿಕೇಟ್ ಮೊದಲನೇ ಸಾಮಾನ್ಯ ಸಭೆಯ ನಡವಳಿಯಲ್ಲಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಮಾನವನ್ನು ತಿದ್ದುಪಡಿ ಮಾಡಿ ದೃಢೀಕರಿಸಲಾಯಿತು. | |

<table>
<tr><td>ಸಾಮಾನ್ಯ ಸಭೆ<br>2022/1.9</td><td>ಡಾ. ಎಸ್. ಇಂದುಮತಿ, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ತಡೆಹಿಡಿದಿರುವ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆ ಮಾಡುವ ಬಗ್ಗೆ.</td></tr>
<tr><td></td><td>
<table>
<tr><th>ತೀರ್ಮಾನ</th><th>ತಿದ್ದುಪಡಿ ತೀರ್ಮಾನ</th></tr>
<tr><td>ಡಾ. ಎಸ್. ಇಂದುಮತಿ, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ತಡೆಹಿಡಿದಿರುವ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಸದರಿಯವರಿಂದ ಒಂದು ಮುಚ್ಚಳಿಕೆಯನ್ನು ಬರೆಸಿಕೊಂಡು ಬಿಡುಗಡೆ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.</td><td>ಡಾ. ಎಸ್. ಇಂದುಮತಿ, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರಿಗೆ ತಡೆಹಿಡಿದಿರುವ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಸೂಕ್ತ ಮುಚ್ಚಳಿಕೆಯೊಂದಿಗೆ ಬಿಡುಗಡೆ ಮಾಡುವಂತೆ ವಿಶ್ವವಿದ್ಯಾನಿಲಯವು ಈಗಾಗಲೇ ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.</td></tr>
</table>
</td></tr>
<tr><td>ಸಾಮಾನ್ಯ ಸಭೆ<br>2022/1.21</td><td>ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಬೋಧನಾ ಕಾರ್ಯಭಾರ ಹಂಚಿಕೆಯ ಬಗ್ಗೆ.</td></tr>
<tr><td></td><td>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ರವರು ಮಾತನಾಡಿ ಹಿಂದಿನ ಮೊದಲ ಸಭೆಯಲ್ಲಿ ಚರ್ಚಿಸಲೆಂದು ಕಾರ್ಯಸೂಚಿಗೆ ವಿಷಯವನ್ನು ನೀಡಲಾಗಿತ್ತು. ಆದರೆ ಅದರ ಉಲ್ಲೇಖವೇ ಆಗಿಲ್ಲ. ಅದೇ ಶೀರ್ಷಿಕೆಯಡಿಯಲ್ಲಿ ಬೇರೆ ವಿಚಾರಗಳು ಪ್ರಸ್ತಾಪವಾಗಿದೆ ಎಂದು ತಿಳಿಸಿದರು. ಮುಂದುವರೆದು ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಬೋಧನಾ ಕಾರ್ಯಭಾರದ ಹಂಚಿಕೆ ವಿಚಾರವಾಗಿ ಹಿಂದಿನ ಮೊದಲನೇ ಸಭೆಯಲ್ಲಿ 4 ಗಂಟೆಗಳಂತೆ ಬೋಧನಾ ಕಾರ್ಯಭಾರವನ್ನು ಹಲವರಿಗೆ ಹಂಚಿಕೆ ಮಾಡಲಾಗಿದೆ. ಅರ್ಹತೆ ಇಲ್ಲದ ಅನೇಕರಿಗೆ ಬೋಧನಾ ಕಾರ್ಯವನ್ನು ನೀಡಲಾಗಿದೆ ಅದರ ಬದಲು ಅದೇ ವಿಷಯದಲ್ಲಿ ನೇಮಕಗೊಂಡ ಕಡಿಮೆ ಅವಧಿ ನಿರ್ವಹಿಸುವ ಬೋಧಕರಿಗೆ ಹೆಚ್ಚುವರಿಯಾಗಿ ನೀಡಿದ್ದಲ್ಲಿ ಅವರಿಗೂ ಅನುಕೂಲವಾಗುತ್ತದೆ ಇದನ್ನು ಸರಿಪಡಿಸಬೇಕಾಗಿದೆ ಎಂದು ಮನವಿ ಮಾಡಿದರು.<br>ಮಾನ್ಯ ಕುಲಪತಿಯವರು ಇದಕ್ಕೆ ಪ್ರತಿಕ್ರಿಯಿಸುತ್ತಾ, ಈ ವಿಷಯವನ್ನು ಮುಂಬರುವ ಸಭೆಯಲ್ಲಿ ಸವಿವರವಾಗಿ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.</td></tr>
<tr><td>ಸಾಮಾನ್ಯ ಸಭೆ<br>2022/1.25</td><td>Meta-I Technologies ಸಂಸ್ಥೆಯವರಿಂದ ಫಲಿತಾಂಶ ವಿಳಂಬ ಹಾಗೂ Atom Technologies ಸಂಸ್ಥೆ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ತಾಂತ್ರಿಕ ಸಮಸ್ಯೆಯ ಬಗ್ಗೆ.</td></tr>
</table>

| | ತೀರ್ಮಾನ | ತಿದ್ದುಪಡಿ ತೀರ್ಮಾನ |
|---|---|---|
| | Meta-I Technologies ಸಂಸ್ಥೆಯವರಿಂದ ಫಲಿತಾಂಶ ವಿಳಂಬ ಹಾಗೂ Atom Technologies ಸಂಸ್ಥೆ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ತಾಂತ್ರಿಕ ಸಮಸ್ಯೆಗಳು ಉದ್ಭವಿಸಿರುವುದರಿಂದ ಸದರಿ ಸಂಸ್ಥೆಗಳಿಗೆ ನೀಡಿರುವ ನೀಡಿರುವ ಹೊರ ಗುತ್ತಿಗೆಯನ್ನು ರದ್ದುಪಡಿಸಿ ಸರ್ಕಾರ ತಯಾರು ಮಾಡಿರುವ Sofwareಅನ್ನು ಬಳಸಿಕೊಂಡು ಮುಂದಿನ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದಲೇ ಫಲಿತಾಂಶಗಳಿಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. | Meta-I Technologies ಸಂಸ್ಥೆಯವರಿಂದ ಫಲಿತಾಂಶ ವಿಳಂಬ ಹಾಗೂ Atom Technologies ಸಂಸ್ಥೆ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ತಾಂತ್ರಿಕ ದೋಷಗಳಿಂದ ಉದ್ಭವಿಸಿರುವ ಸಮಸ್ಯೆಗಳನ್ನು ಸರಿಪಡಿಸಿ ಇನ್ನು ಮುಂದೆ ಸರ್ಕಾರ ತಯಾರು ಮಾಡಿರುವ Sofware ಆದ UUCMSಅನ್ನು ಬಳಸಿಕೊಂಡು ಈ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದಲೇ ಫಲಿತಾಂಶಗಳಿಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಇತರೆ ವಿಷಯಗಳು–8** | ಡಾ. ಚೈತ್ರನಾರಾಯಣರವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳು (ಪ್ರವೇಶಾತಿ ಶುಲ್ಕ, ಘಟಿಕೋತ್ಸವ ಶುಲ್ಕ, ಪರೀಕ್ಷಾ ಶುಲ್ಕ) ಎಲ್ಲಾ ರೀತಿಯ ಶುಲ್ಕಗಳನ್ನು ಪಾವತಿಸಲು ಸಾಲುಗಟ್ಟಲೆ ಸರದಿಯಲ್ಲಿ ನಿಂತಿರುತ್ತಾರೆ. ವಿದ್ಯಾರ್ಥಿಗಳು ಪಾವತಿಸುವ ಎಲ್ಲಾ ರೀತಿಯ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. | |
| | **ತೀರ್ಮಾನ** | **ತಿದ್ದುಪಡಿ ತೀರ್ಮಾನ** |
| | ಮಾನ್ಯ ಕುಲಪತಿಗಳು ಮಾತನಾಡಿ, ಆನ್‌ಲೈನ್ ಮುಖಾಂತರ ಪ್ರವೇಶಾತಿ ಶುಲ್ಕ ಪಾವತಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು ಸರ್ವರ್ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತಿರುತ್ತದೆ. ನಮ್ಮ ಆವರಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರನ್ನು ಕರೆಸಿ ಈ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲು ತಿಳಿಸಲಾಗುವುದು ಎಂದು ತಿಳಿಸಿದರು. | ಮಾನ್ಯ ಕುಲಪತಿಗಳು ಮಾತನಾಡಿ, ಆನ್‌ಲೈನ್ ಮುಖಾಂತರ ಪ್ರವೇಶಾತಿ ಶುಲ್ಕ ಪಾವತಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು ಸರ್ವರ್ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತಿರುತ್ತದೆ ಎಂದು ತಿಳಿಸಿದರು. ನಮ್ಮ ಆವರಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರನ್ನು ಕರೆಸಿ ಈ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲು ತಿಳಿಸಲಾಗುವುದು ಹಾಗೂ ಆನ್‌ಲೈನ್ ಫೀಸ್ ಕಟ್ಟಲು ಸಂಬಂಧಿಸಿದಂತೆ ಉಪಸಮಿತಿಯನ್ನು ರಚಿಸಲಾಗುವುದು ಎಂದು ಮಾನ್ಯ ಕುಲಪತಿಗಳು ತಿಳಿಸಿದರು. |
| **ಇತರೆ ವಿಷಯಗಳು– 11** | **ತೀರ್ಮಾನ** | **ತಿದ್ದುಪಡಿ ತೀರ್ಮಾನ** |
| | ಶ್ರೀಮತಿ ಪವಿತ್ರ ವೈ.ಕೆ ರವರು ಮಾತನಾಡಿ, ಸಂಯೋಜನೆಗೆ ಸಂಬಂಧಿಸಿದಂತೆ ಸ್ವಾಯತ್ತ ಕಾಲೇಜುಗಳಲ್ಲಿ Governing Council Meeting ಗಳು ಎಷ್ಟು ಜರುಗಿದೆ ಎಂಬ ಮಾಹಿತಿ ಹಾಗೂ ನಡವಳಿಗಳನ್ನು ಲಗತ್ತಿಸಿ ಸದಸ್ಯರಿಗೆ ನೀಡಬೇಕೆಂದು ಕೋರಿದರು. | During affiliation process, college shall compulsorily submit Governing Council meeting proceedings (minimum 2 meetings in each Academic Year). |
| **ತೀರ್ಮಾನ** | **ದಿನಾಂಕ : 01–02–2022ರಂದು ಜರುಗಿದ "ಮೊದಲನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಗಳನ್ನು ಮೇಲಿನ ತಿದ್ದುಪಡಿಗಳೊಂದಿಗೆ ಸಭೆಯಲ್ಲಿ ದೃಢೀಕರಿಸಲಾಯಿತು.** | |
| | **ದಿನಾಂಕ: 01–02–2022ರಂದು ಜರುಗಿದ "ಮೊದಲನೇ ಸಾಮಾನ್ಯ ಸಿಂಡಿಕೇಟ್ ಸಭೆಯ ತೀರ್ಮಾನಗಳ ಕುರಿತು ತೆಗೆದುಕೊಂಡ ಕ್ರಮಗಳನ್ನು ಸಿಂಡಿಕೇಟ್‌ಸಭೆಯಲ್ಲಿ ಗಮನಿಸಲಾಯಿತು. (Action Taken Report).** | |

| | |
|---|---|
| **ಸಾಮಾನ್ಯ ಸಭೆ 2022/2.1** | ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಹೊಸದಾಗಿ ಆಹ್ವಾನಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಹೊಸದಾಗಿ ಆಹ್ವಾನಿಸುವ ಸಂಬಂಧ, ಮೂವರು ತಜ್ಞರಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/2.2** | ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಶ್ರೀ ಗುಬ್ಬಿ ವೀರಣ್ಣ ಪೀಠಕ್ಕೆ ರಂಗ ತಜ್ಞರನ್ನು ಆಹ್ವಾನಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಶ್ರೀ ಗುಬ್ಬಿ ವೀರಣ್ಣ ಪೀಠಕ್ಕೆ ರಂಗ ತಜ್ಞರು/ವಿಷಯ ತಜ್ಞರಾಗಿ ಮೂವರು ತಜ್ಞರಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/2.3** | ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಹೊಸದಾಗಿ ಆಹ್ವಾನಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಹೊಸದಾಗಿ ಆಹ್ವಾನಿಸುವ ಸಂಬಂಧ ಮೂವರು ತಜ್ಞರಲ್ಲಿ ಒಬ್ಬರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/2.4** | ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಪ್ರೊ. ಕೆ. ಅನಂತರಾಮು ಇವರನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/2.5** | ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರವಾದ BET Academy of Higher Education PG & Research ಹೆಸರನ್ನು Bharathi College Post Graduate and Research Centre ಎಂದು ಬದಲಾವಣೆ ಮಾಡಲು ಕೋರಿರುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರವಾದ BET Academy of Higher Education PG & Research ಹೆಸರನ್ನು Bharathi College Post Graduate and Research Centre ಎಂದು ಬದಲಾವಣೆ ಮಾಡಲು ನಿಯಮಾನುಸಾರ ರೂ.41,750/- ಗಳ ನಿಗಧಿತ ಶುಲ್ಕ ಪಾವತಿಸಿ ಸದರಿ ಸಂಶೋಧನಾ ಕೇಂದ್ರದ ನಿರ್ದೇಶಕರು ಕೋರಿರುವ ಮನವಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/2.6** | ಮಹಾರಾಜ ರೀಸರ್ಚ್ ಫೌಂಡೇಷನ್, ಮೈಸೂರು, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಪಿಹೆಚ್.ಡಿ. ಸಂಶೋಧನೆ ನಡೆಸಲು ಕೋರಿರುವ ಹೆಚ್ಚುವರಿ ವಿಷಯಗಳ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |

| | |
|---|---|
| ತೀರ್ಮಾನ | ಮಹಾರಾಜ ರೀಸರ್ಚ್ ಫೌಂಡೇಷನ್, ಮೈಸೂರು, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಪಿಹೆಚ್.ಡಿ. ಸಂಶೋಧನೆ ನಡೆಸಲು ಈಗಾಗಲೇ ವಿಶ್ವವಿದ್ಯಾನಿಲಯದಿಂದ Computer Science and Information Science, Management and Electronics ವಿಷಯಗಳಿಗೆ ಮಾನ್ಯತೆ ಪಡೆದು ನಡೆಸುತ್ತಿರುವ ಕೋರ್ಸುಗಳ ಜೊತೆಗೆ ಹೆಚ್ಚುವರಿಯಾಗಿ, Physics, Chemistry & Mathematics ವಿಷಯಗಳಿಗೆ ವಿಶ್ವವಿದ್ಯಾನಿಲಯದ ಮಾನ್ಯತೆ ಕೋರಿರುವ ಸಂಬಂಧ ಸದರಿ ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ, ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.7 | ವೋಗ್ ಇನ್ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯ ನಾಮಾಂಕಿತವನ್ನು Vogue Institute of Design ಎಂದು ಬದಲಾವಣೆ ಮಾಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ವೋಗ್ ಇನ್ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯ ನಾಮಾಂಕಿತವನ್ನು Vogue Institute of Design ಎಂದು ಬದಲಾವಣೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.8 | ICARE School of Research and Development ಮಾರೇನಹಳ್ಳಿ ಮುಖ್ಯ ರಸ್ತೆ, ಬಾಗಲೂರು, ಬೆಂಗಳೂರು ಇವರು ಈಗಾಗಲೇ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Biochemistry, Law, Education, English ಮತ್ತು Food Science and Nutrition ವಿಷಯಗಳಲ್ಲಿ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ICARE School of Research and Development ಮಾರೇನಹಳ್ಳಿ ಮುಖ್ಯ ರಸ್ತೆ, ಬಾಗಲೂರು, ಬೆಂಗಳೂರು ಇವರು ಈಗಾಗಲೇ ವಿಶ್ವವಿದ್ಯಾನಿಲಯದ ಸಂಶೋಧನಾ ಮಾನ್ಯತೆ ಪಡೆದು Management, Physics, Biotechnology, Computer Science ಮತ್ತು Chemistry ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Biochemistry, Law, Education, English ಮತ್ತು Food Science and Nutrition ವಿಷಯಗಳಲ್ಲಿ ಸಂಶೋಧನಾ ನಡೆಸಲು ವಿಶ್ವವಿದ್ಯಾನಿಲಯದ ಮಾನ್ಯತೆ ಕೋರಿದ್ದ ಸಂಬಂಧ, ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಆನ್‌ಲೈನ್(Virtual Mode) ಮೂಲಕ ಪರಿಶೀಲಿಸಿ, ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.9 | Asia Pacific Institute of Embryology, Dattagalli, Mysuru ಇವರಿಗೆ ಹೊಸದಾಗಿ Clinical Embryology ವಿಷಯದಲ್ಲಿ ಪಿಹೆಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | Asia Pacific Institute of Embryology, Dattagalli, Mysuru ಇವರು ಹೊಸದಾಗಿ Clinical Embryology ವಿಷಯದಲ್ಲಿ ಪಿಹೆಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ, ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.10 | ಬಿ.ಎಸ್.ಡಿ. ಕ್ರೆಸ್ಟ್ ಬನ್ನೂರು ರಸ್ತೆ, ಮೈಸೂರು ಇವರು Specialized Programme ಅಡಿಯಲ್ಲಿ ಹೊಸದಾಗಿ ಆರಂಭಿಸಲು ಕೋರಿರುವ ಪದವಿ ಕೋರ್ಸುಗಳ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಬಿ.ಎಸ್.ಡಿ. ಕ್ರೆಸ್ಟ್ ಬನ್ನೂರು ರಸ್ತೆ, ಮೈಸೂರು ಇವರು Specialized Programme ಅಡಿಯಲ್ಲಿ ವಿಶ್ವವಿದ್ಯಾನಿಲಯದಿಂದ ಹೊಸದಾಗಿ 1) B.Des (Hons.) Architectural Design Construction |

| | |
|---|---|
| | 2) B.Des (Hons.) (Interaction and Experience Design) ಮತ್ತು 3) B.Des (Hons.) (Structural Civil Design), ಪ್ರತಿ ಕೋರ್ಸ್‌ಗೆ 40 ಪ್ರವೇಶಾತಿ ಮಿತಿಯೊಂದಿಗೆ ಪದವಿ ಕೋರ್ಸ್‌ಗಳನ್ನು ಆರಂಭಿಸಲು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ನೀಡುವಂತೆ ಕೋರಿರುವ ಸಂಬಂಧ, ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.11 | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರ ಸಂಸ್ಥೆಯಲ್ಲಿ Mathematics, Ancient History and Archaeology, Economics ಮತ್ತು Commerce ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರು ಹೊಸದಾಗಿ Mathematics, Ancient History and Archaeology, Economics ಮತ್ತು Commerce ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ, ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.12 | ಸಿಂಡಿಕೇಟ್ ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | ಸಿಂಡಿಕೇಟ್ ಸದಸ್ಯರುಗಳಿಗೆ ಸಿಂಡಿಕೇಟ್ ಸಭೆಗೆ ಹಾಜರಾದಾಗ ಮಾತ್ರ ಅನ್ವಯಿಸುವಂತೆ ಆಸನ ಭತ್ಯೆಯನ್ನು ರೂ.5,000/- ಗಳಿಂದ ರೂ.7,000/- ಗಳಿಗೂ ಮತ್ತು ಪ್ರಯಾಣ ಭತ್ಯೆ ಪ್ರತಿ ಕಿ.ಮೀ.ಗೆ ರೂ.8/- ಗಳಿಂದ ರೂ.12/-ಗಳಿಗೆ ಹೆಚ್ಚಿಸಿ ದಿನಾಂಕ 19/3/22ರಿಂದ ಜಾರಿಗೆ ಬಂದಂತೆ ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/2.13 | ಕೋವಿಡ್-19 ಕೊರೋನಾ ವೈರಸ್ ಸಮಯದಲ್ಲಿ ಮೈಸೂರು ನಗರ ವ್ಯಾಪ್ತಿಯಲ್ಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ವಿದಾರ್ಥಿನಿಲಯಗಳಲ್ಲಿ ಉಳಿದಿರುವ ವಿವಿಧ ದಿನಸಿ ಪದಾರ್ಥಗಳ ಮೂಲಕ 477 ಫುಡ್‌ಕಿಟ್‌ಗಳನ್ನು ತಯಾರಿಸಿ, ವಿತರಿಸಿರುವುದಕ್ಕೆ ಅನುಸಮರ್ಥನೆಗಾಗಿ. |
| ತೀರ್ಮಾನ | ಕೋವಿಡ್-19 ಕೊರೋನಾ ವೈರಸ್ ಸಮಯದಲ್ಲಿ ಮೈಸೂರು ನಗರ ವ್ಯಾಪ್ತಿಯಲ್ಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ವಿದಾರ್ಥಿನಿಲಯಗಳಲ್ಲಿ ಉಳಿದಿರುವ ವಿವಿಧ ದಿನಸಿ ಪದಾರ್ಥಗಳ ಮೂಲಕ 477 ಫುಡ್‌ಕಿಟ್‌ಗಳನ್ನು ತಯಾರಿಸಿ, ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳು, ಸ್ವಚ್ಛತಾ ಸಿಬ್ಬಂದಿ, ಕಾವಲುಗಾರರು ಹಾಗೂ 'ಡಿ' ದರ್ಜೆ ನೌಕರರುಗಳಿಗೆ ವಿತರಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/2.14 | "ಶ್ರೀಮತಿ ಸುಮಂಗಲಮ್ಮ ರಂಗಸ್ವಾಮಿ ನಗದು ಬಹುಮಾನ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Sc in Chemistry ಸಂಬಂಧಿತ ವಿಷಯದಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ನಗದು ಬಹುಮಾನ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ **"ಶ್ರೀಮತಿ ಸುಮಂಗಲಮ್ಮ ರಂಗಸ್ವಾಮಿ ನಗದು ಬಹುಮಾನ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/2.15** | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ / ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | 1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು ಬಿ.ಎಸ್ಸಿ. ವಿಷಯ/ಪತ್ರಿಕೆಯಲ್ಲಿ ಮೊದಲನೇ ರ್‍ಯಾಂಕ್ ಪಡೆದು ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"ಎಚ್.ಎಮ್.ವರ್ಷಿತ ಸ್ಮರಣ ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>2) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು ಬಿ.ಎಸ್ಸಿ. ವಿಷಯ/ಪತ್ರಿಕೆಯಲ್ಲಿ ಎರಡನೇ ರ್‍ಯಾಂಕ್ (ಪ್ರಥಮ ಬಾರಿಗೆ) ಪಡೆದು ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"ಎಚ್.ಎಮ್.ವರ್ಷಿತ ಸ್ಮರಣ ನಗದು ಬಹುಮಾನ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/2.16** | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | 1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"DSR Infrastruture Pvt. Ltd., ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>2) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX), ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"Siddesh Nagendra" ಚಿನ್ನದ ಪದಕ** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>3) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX), ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"M/s KNS Infrastructure Pvt. Ltd., ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>4) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX), ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ |

| | |
|---|---|
| | ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"Prestige Estates Project Ltd., ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>5) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX), ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"Total Enviornment System Pvt. Ltd., ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>6) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX), ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"M/s Assetz Buildwell LLP ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>7) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX), ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Tech in Urban and Regional Planning ವಿಷಯ/ಪತ್ರಿಕೆಯಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ **"Bhartiya Urban Private Limited ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/2.17** | ಪ್ರೊ. ಮಹೇಶ್ ಆರ್., ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿಗೆ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಲು ನೇಮಿಸಿರುವ ಬಗ್ಗೆ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಪ್ರೊ. ಮಹೇಶ್ ಆರ್. ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿಗೆ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/2.18** | ಹಿಂದಿ ಅಧ್ಯಯನ ಮಂಡಳಿ (UG) ಮತ್ತು (PG)ಯನ್ನು ಪುನರ್‌ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಹಿಂದಿ ಅಧ್ಯಯನ ಮಂಡಳಿ (UG) ಮತ್ತು (PG)ಯನ್ನು ಪುನರ್‌ರಚಿಸಿ ದಿನಾಂಕ 11.02.2022 ಹಾಗೂ 21.02.2022 ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| **ಸಾಮಾನ್ಯ ಸಭೆ 2022/2.19** | ಪ್ರೊ. ರಫತುನ್ನೀಸಾ ಬೇಗಂ (ನಿವೃತ್ತ ಪ್ರಾಧ್ಯಾಪಕರು), ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿರುವ ಬಗ್ಗೆ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ದಿನಾಂಕ 10-3-2022 ರಿಂದ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ ಪ್ರೊ.ರಫತುನ್ನೀಸಾ ಬೇಗಂ (ನಿವೃತ್ತ ಪ್ರಾಧ್ಯಾಪಕರು), ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/2.20** | Physical Education (UG) under NEP ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ Physical Education (UG) under NEP ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ ದಿನಾಂಕ 03.02.2022 ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/2.21** | Physics ಅಧ್ಯಯನ ಮಂಡಳಿ(UG)ಯನ್ನು ಪುನರ್‌ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ Physics (UG) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ ದಿನಾಂಕ 07.03.2022 ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/2.22** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡಲಾಗಿರುವ ದಾನಿಗಳ ಕಿರುಪರಿಚಯ ನೀಡುವ ಪುಸ್ತಕ ಹೊರತರುವ ಕಾರ್ಯಪ್ರಗತಿ ಬಗೆಗೆ. |
| | ಶ್ರೀ.ಪ್ರದೀಪ್ ಕುಮಾರ್ ದೀಕ್ಷಿತ್ ರವರು ಮಾತನಾಡಿ, ಚಿನ್ನದ ಪದಕ/ ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡುವ ದಾನಿಗಳ ವಿವರಗಳನ್ನೊಳಗೊಂಡ ಕೈಪಿಡಿಯನ್ನು ಪ್ರಸ್ತುತ ಘಟಿಕೋತ್ಸವದಲ್ಲಿ ನೀಡಲು ಕ್ರಮಕೈಗೊಳ್ಳಲಾಗುವುದೆಂದು ಈ ಹಿಂದೆಯೇ ತಿಳಿಸಲಾಗಿತ್ತು. ಆದರೆ ಇನ್ನೂ ಕಾರ್ಯ ಸಂಪೂರ್ಣವಾಗಿಲ್ಲವೆಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕೆಲವು ದಾನಿಗಳ ವಿಳಾಸ ಬದಲಾವಣೆಯಾಗಿದೆ ಹಾಗೂ ದಿನಾಂಕ 22-3-2022 ರಂದು ಘಟಿಕೋತ್ಸವ ನಿಗದಿಯಾಗಿರುವುದರಿಂದ ಸದರಿ ಕಾರ್ಯಕ್ರಮ ಮುಗಿದ ನಂತರ ಈ ಸಂಬಂಧ ಉಪಸಮಿತಿ ಸಭೆಯನ್ನು ಕರೆದು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.<br><br>ಈ ಹಿಂದಿನ ವರ್ಷದಿಂದಲ್ಲೇ ಆಸಕ್ತಿ ವಹಿಸಿ ಹಲವು ಬಾರಿ ಮನವಿ ಮಾಡಿದರೂ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದೆ ನಮ್ಮ ಅವಧಿಯ ಘಟಿಕೊತ್ಸವದಲ್ಲೇ ಆಗದಿದ್ದ ಮೇಲೆ ಮುಂದಿನ ಘಟಿಕೋತ್ಸವದಲ್ಲಿ ಹೇಗೆ ನೀಡುತ್ತಿರಿ ಎಂದು ಶ್ರೀ.ಪ್ರದೀಪ್ ಕುಮಾರ್ ದೀಕ್ಷಿತ್ ರವರು ಪ್ರಶ್ನಿಸಿದರು. |
| **ತೀರ್ಮಾನ** | ದಿನಾಂಕ 22-3-2022 ರಂದು ಘಟಿಕೋತ್ಸವ ನಿಗದಿಯಾಗಿರುವುದರಿಂದ ಸದರಿ ಕಾರ್ಯಕ್ರಮ ಮುಗಿದ ನಂತರ ಈ ಸಂಬಂಧ ಉಪಸಮಿತಿ ಸಭೆಯನ್ನು ಕರೆದು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

| | |
|---|---|
| ಸಾಮಾನ್ಯ ಸಭೆ 2022/2.23 | Visit of Prof. G. Hemantha Kumar, Vice Chancellor, University of Mysore, Mysuru to Paris (France) and Finland. |
| | Prof.G.Hemantha Kumar, Vice Chancellor, University of Mysore has explained that Prof.Sabeastien Lacroix-Desmazes INSERM-France in his letter dated 8th March 2022 has invited him to visit Equipe 16 INSERM UMRS 1138, Centre de Recherche des Cordeliers, Paris (France) from April 9th to 14th 2022 to establish an MOU with University of Mysore in the area of Applied Biological Sciences and also to discuss about the Collaborative Research Project in interdisciplinary Sciences for European grants.<br><br>Dr.Tejesvi Mysore, Associate Professor, Ecology and Genetics, University of Oulu, Finland in his letter dated 11-3-2022 has also invited him to visit the University of Oulu, Finland from April, 15th to 17th 2022 to establish an MOU with University of Mysore in the field of Biological Science and he also informed that the Finland Academy of Sciences is interested to have a joint research project in the field of new antimicrobials in collaboration with the faculty members of University of Mysore.<br><br>Hence the subject of visit to Paris (France) and Finland from 9th to 17th April 2022 and also to bear the expenditure which approximately cost about Rs.60,000/- are placed before Syndicate for consideration and approval. |
| Decision | The visit of Prof.G.Hemantha Kumar, Vice Chancellor, University of Mysore, Mysuru to Paris (France) and Finland from 9th to 17th April 2022 and also the expenditure approximately cost about Rs.60,000/- towards airfare shall be borne from the internal resources of University of Mysore are approved. |
| ಸಾಮಾನ್ಯ ಸಭೆ 2022/2.24 | ಮೆ:ನವೀನ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ನೀಡಿರುವ ಕಾರ್ಯಾದೇಶದ ಬಗ್ಗೆ ಅನುಸಮರ್ಥನೆಗಾಗಿ– |
| | ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ 2021–22ನೇ ಸಾಲಿನ 102ನೇ ಘಟಿಕೋತ್ಸವಕ್ಕೆ ಅಂದಾಜು 450 ಚಿನ್ನದ ಪದಕ ತಯಾರಿಸಿ ಸರಬರಾಜು ಮಾಡುವಂತೆ ದಿನಾಂಕ 11–2–2022ರಂದು ಟೆಂಡರ್ ಆಹ್ವಾನಿಸಲಾಗಿ ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ನಡೆಸಿ ದಿನಾಂಕ 23–2–2022 ರಂದು ನಡೆದ ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯು ಪ್ರತಿ ಚಿನ್ನದ ಪದಕಕ್ಕೆ ಅತಿ ಕಡಿಮೆ ದರ ರೂ.2,333.98/–ಗಳನ್ನು ನಿಗಧಿಪಡಿಸಿದ ಮೆ:ನವೀನ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ಚಿನ್ನದ ಪದಕ ತಯಾರಿಸಿ ಸರಬರಾಜು ಮಾಡುವಂತೆ ಕಾರ್ಯಾದೇಶವನ್ನು ನೀಡಲು ಸಮಿತಿಯು ಶಿಫಾರಸ್ಸು ಮಾಡಲಾಗಿ ದಿನಾಂಕ 3–3–2022ರಂದು ಮೆ:ನವೀನ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ರೂ.500/–ಗಳ ಒಡಂಬಡಿಕೆ ಮತ್ತು ಶೇ.5 ರಂತೆ ಇ.ಎಂ.ಡಿ.ಮೊತ್ತವನ್ನು ವಿ.ವಿ.ಖಾತೆಗೆ ಪಾವತಿಸುವಂತೆ ಕಾರ್ಯಾದೇಶವನ್ನು ನೀಡಲಾಗಿತ್ತು. ಆದರೆ ದಿನಾಂಕ 3–3–2022 ರ ಸದರಿ ದಿನದಂದೆ ಮೆ:ನವೀನ ಎಂಟರ್‌ಪ್ರೈಸಸ್, ಬೆಂಗಳೂರು ಇವರು ತಮ್ಮ ಪತ್ರದಲ್ಲಿ "ಟೆಂಡರ್ ಸಲ್ಲಿಸಿದಾಗ ಬೆಳ್ಳಿಯ ದರ ರೂ.62,000/– ಗಳು (3% ಜಿಎಸ್‌ಟಿ) ಆಗಿದ್ದು ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಉಕ್ರೇನ್ ಯುದ್ಧದ ಕಾರಣ ಬೆಳ್ಳಿ ದರ ಪ್ರತಿ ಕೆ.ಜಿ.ಗೆ ರೂ.70,000/–ಗಳು (3% ಜಿಎಸ್‌ಟಿ) ಹೆಚ್ಚಾಗಿದ್ದ ಕಾರಣ ಪ್ರತಿ ಪದಕಕ್ಕೆ ರೂ.450/–ಗಳ ಹೆಚ್ಚುವರಿ ಮೊತ್ತವನ್ನು ನೀಡಬೇಕೆಂದು ಕೋರಿರುತ್ತಾರೆ. ಸದರಿ ಪತ್ರದನ್ವಯ ದಿನಾಂಕ 11–3–2022 ರಂದು ನಡೆದ ತಾಂತ್ರಿಕ ಪರಿಶೀಲನಾ ಸಭೆಯು ಬೆಳ್ಳಿಯ ದರವನ್ನು ಅಂತರ್ಜಾಲದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿ ಫೆಬ್ರವರಿ 21ನೇ 2022 ರಂದು ಬೆಳ್ಳಿಯ ದರ ಪ್ರತಿ ಕೆ.ಜಿಗೆ ರೂ.63,112/–ಗಳು ಅಂತೆಯೇ ಮಾರ್ಚ್ 3ನೇ 2022 |

| | |
|---|---|
| | ರಂದು ಬೆಳ್ಳಿಯ ದರ ಪ್ರತಿ ಕೆ.ಜಿ.ಗೆ ರೂ.74,600/-ಗಳಾಗಿದ್ದು ಇದರ ವ್ಯತ್ಯಾಸ ರೂ.11,488/-ಗಳಾಗಿರುತ್ತದೆ. ಇಂದಿನ ದರಕ್ಕೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಪ್ರಕ್ರಿಯೆಗಳನ್ನು ನಡೆಸಿದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಅಂದಾಜು ವೆಚ್ಚ ರೂ.5 ಲಕ್ಷದವರೆಗೆ ಹೊರೆಯಾಗುವ ಕಾರಣ ಮತ್ತು ಕುಲಾಧಿಪತಿಗಳು ಆದ ಮಾನ್ಯ ರಾಜ್ಯಪಾಲರು ಕರ್ನಾಟಕ ಸರ್ಕಾರರವರ ಆದೇಶದ ಮೇರೆಗೆ ದಿನಾಂಕ 22-3-2022 ರಂದು 102ನೇ ಘಟಿಕೋತ್ಸವ ನಡೆಸಲು ಸೂಚಿಸಿರುವುದರಿಂದ ಮತ್ತು ಸಮಯದ ಅಭಾವದಿಂದಾಗಿ ಮೆ:ನವೀನ ಎಂಟರ್‌ಪ್ರೈಸಸ್, ಬೆಂಗಳೂರು ರವರ ಮನವಿ ಪತ್ರ ಆಧಾರದ ಮೇಲೆ ಮಾರುಕಟ್ಟೆ ದರ ಆಧರಿಸಿ ಈಗಾಗಲೇ ನಿಗದಿಪಡಿಸಿರುವ ಪ್ರತಿ ಚಿನ್ನದ ಪದಕಕ್ಕೆ (ಹಿಂದಿನ ದರ ರೂ.2,333.98/- ಗಳು) ರೂ.400/-ಗಳನ್ನು ಹೆಚ್ಚಾಗಿ ನೀಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಅಂದಾಜು ರೂ.3 ಲಕ್ಷ ರೂಪಾಯಿಗಳು ಉಳಿತಾಯವಾಗುವ ಹಿನ್ನೆಲೆಯಲ್ಲಿ ಮೆ:ನವೀನ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ಅಂದಾಜು 400 ಚಿನ್ನದ ಪದಕ ತಯಾರಿಸಿ ಸರಬರಾಜು ಮಾಡುವಂತೆ ಮತ್ತು ಪ್ರತಿ ಚಿನ್ನದ ಪದಕಕ್ಕೆ ಸಮಿತಿಯು ರೂ.2,733.98/- ದರವನ್ನು ನೀಡುವಂತೆ ತೀರ್ಮಾನಿಸಿದ ಸಂಬಂಧ ಸದರಿಯವರಿಗೆ ಕಾರ್ಯಾದೇಶ ನೀಡಿರುವುದನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ವಿವರಿಸಿದರು. |
| ತೀರ್ಮಾನ | **ಮೆ: ನವೀನ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ಅಂದಾಜು 400 ಚಿನ್ನದ ಪದಕ ತಯಾರಿಸಿ ಸರಬರಾಜು ಮಾಡುವಂತೆ ಮತ್ತು ಪ್ರತಿ ಚಿನ್ನದ ಪದಕಕ್ಕೆ ರೂ.2,733.98/- ದರವನ್ನು ನೀಡುವಂತೆ ತೀರ್ಮಾನಿಸಿ ಸದರಿಯವರಿಗೆ ನೀಡಿರುವ ಕಾರ್ಯಾದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2022/2.25** | Promotions to University Teachers Under UGC-CAS |
| **Decision** | The recommendations of the Selecting cum Evaluation Committee in various subjects for promotion of teachers in various disciplines to the next academic level furnished at Annexure-A is approved. Further, the Syndicate has also decided to extend the monetary benefits to the Teachers from the date of the decision of the Syndicate. |
| **ಸಾಮಾನ್ಯ ಸಭೆ 2022/2.26** | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಕಂಪ್ಯೂಟರ್, ಪ್ರಿಂಟರ್, ಪ್ರೊಜೆಕ್ಟರ್, ಇಂಟರ್‌ನೆಟ್ ಉಪಕರಣಗಳು ಮತ್ತು ಪ್ರಿಂಟರ್, Photocopier cartridges refilling ಗಳನ್ನು ದರ ಒಪ್ಪಂದದ ಮುಖಾಂತರ ಮೂರು ವರ್ಷದ ಅವಧಿಗೆ ರಿಪೇರಿ, ಅಗತ್ಯ ಉಪಕರಣ ಸರಬರಾಜು ಮತ್ತು ನಿರ್ವಹಣೆಯ ಸಂಬಂಧದ ಟೆಂಡರ್‌ನ ಬಗ್ಗೆ. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಕಂಪ್ಯೂಟರ್, ಪ್ರಿಂಟರ್, ಪ್ರೊಜೆಕ್ಟರ್, ಇಂಟರ್‌ನೆಟ್ ಉಪಕರಣಗಳು ಮತ್ತು ಪ್ರಿಂಟರ್, Photocopier cartridges refilling ಗಳನ್ನು ದರ ಒಪ್ಪಂದದ ಮುಖಾಂತರ ಮೂರು ವರ್ಷದ ಅವಧಿಗೆ ರಿಪೇರಿ, ಅಗತ್ಯ ಉಪಕರಣ ಸರಬರಾಜು ಮತ್ತು ನಿರ್ವಹಣೆಯ ಸಂಬಂಧದ ವಾರ್ಷಿಕ ಅಂದಾಜು ಮೊತ್ತ ರೂ.30,00,000/-ಗಳಿಗೆ ಹಾಗೂ "Supply, installation and commissioning of desktop computers, repair of unused computers, printers and internet connection to various deparments of University of Mysore, Mysuru" ನ ಕಾರ್ಯದ ಅಂದಾಜು ಮೊತ್ತ ರೂ.1,48,97,060/-ಗಳಿಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಮತ್ತು 2000(KTPP Act) ನಿಯಮವನ್ನು ಅನುಸರಿಸಿ, ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ, ಸದರಿ ಅಂದಾಜು ವೆಚ್ಚಗಳನ್ನು "ಐ.ಐ.ಡಿ.ಎಫ್" ಶೀರ್ಷಿಕೆಯಿಂದ ಭರಿಸಲು ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2022/2.27 | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ವಿವಿಧ ಮಾದರಿಯ ನಾಮಫಲಕಗಳನ್ನು ಅಳವಡಿಸಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ವಿವಿಧ ಮಾದರಿಯ ನಾಮಫಲಕಗಳನ್ನು ಅಳವಡಿಸಲು ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಮತ್ತು 2000(KTPP Act) ವಿನಾಯಿತಿಗಳನುಸಾರ ಸರ್ಕಾರದ ಆದೇಶ ಸಂಖ್ಯೆ:ಆಇ.157 ವೆಚ್ಚ-12/2021 ದಿನಾಂಕ 17.03.2021ರಂತೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಮೈಸೂರು ರವರಿಗೆ ವಹಿಸಿ ನಿರ್ವಹಿಸುವ ಸಂಬಂಧದ ಅಂದಾಜು ವೆಚ್ಚಗಳಿಗೆ ಮಾನ್ಯ ಕುಲಪತಿಗಳ ಆದೇಶದಂತೆ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಕಾರ್ಯಪಾಲಕ ಅಭಿಯಂತರರು, ವಿ.ವಿ.ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಸದರಿ ಅಂದಾಜು ವೆಚ್ಚಗಳನ್ನು "ಐ.ಡಿ.ಎಫ್-314" ಶೀರ್ಷಿಕೆಯಿಂದ ಭರಿಸಲು ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/2.28 | Kingston University, ಲಂಡನ್‌ನಿಂದ ಪರಸ್ಪರ ವಿನಿಮಯದಡಿ 10 ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಲು ಅನುಮತಿ ಕೋರಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು Dr.Wilson Muleya, Head of Dept. & Associate Professor, Department of Social work 7 Social Care, School of Education, Midwifery & Social Work, Kingston University, ಇವರ ಇ-ಮೇಲ್ ಹಿನ್ನೆಲೆಯಲ್ಲಿ Kingston University, ಲಂಡನ್‌ನಿಂದ 10 ವಿದ್ಯಾರ್ಥಿಗಳು 28 ದಿನಗಳ Practice Placement ಕಾರ್ಯಕ್ರಮ ಕೈಗೊಳ್ಳಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಲು ಅನುಮತಿ ಕೋರಿರುತ್ತಾರೆ, ಮುಂದುವರಿದು, ಇದೇ ರೀತಿಯ ಕಾರ್ಯಕ್ರಮಕ್ಕೆ ಒಡಂಬಡಿಕೆ (MOU) ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ 2009 ರಿಂದ 2016 ರವರೆಗೆ ಪರಸ್ಪರ ವಿನಿಮಯದಡಿ ಅನುಮತಿ ನೀಡಲಾಗಿತ್ತೆಂದು ಸಹ ತಿಳಿಸಿದ್ದು, ಪ್ರಸಕ್ತ ಭೇಟಿಯ ಬಗ್ಗೆ ಅನುಮತಿ ಕೋರಿರುವ ಸಂಬಂಧ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲವೆಂದು, ಸದರಿ ಕಾರ್ಯಕ್ರಮದ ವೆಚ್ಚವನ್ನು Kingston University ಭರಿಸಲಿದೆ ಹಾಗೂ Practice Placement ಕಾರ್ಯಕ್ರಮವು ಜುಲೈ-ಆಗಸ್ಟ್ 2022ರ ನಡುವೆ ನಡೆಯಲಿದ್ದು, ವಿದ್ಯಾರ್ಥಿಗಳ ವಾಸ್ತವ್ಯ, ಪ್ರಯಾಣ, ಊಟೋಪಚಾರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷರು ನಿರ್ವಹಿಸುವರೆಂದು ಮತ್ತು VISA ಹಾಗೂ Residential Permit ಸೌಲಭ್ಯವನ್ನು ಅಂತರಾಷ್ಟ್ರೀಯ ಕೇಂದ್ರದಿಂದ ವಿಸ್ತರಿಸಲಾಗುವುದೆಂದು ತಿಳಿಸಿರುತ್ತಾರೆ ಎಂದು ಸಭೆಗೆ ವಿವರಣೆ ನೀಡಿದರು. ಮುಂದುವರೆದು, ಮೈಸೂರು ವಿಶ್ವವಿದ್ಯಾನಿಲಯ ಹಾಗೂ Kingston University ನಡುವೆ ಅಧ್ಯಾಪಕರು/ವಿದ್ಯಾರ್ಥಿಗಳ ಪರಸ್ಪರ ವಿನಿಮಯ ಕಾರ್ಯಕ್ರಮದಡಿ ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದ್ದು, ಈ ಒಡಂಬಡಿಕೆಯ ಅವಧಿಯು ದಿನಾಂಕ 31-8-2019ರಂದು ಮುಕ್ತಾಯವಾಗಿದ್ದು, ಇದನ್ನು ನವೀಕರಿಸುವ ಅಗತ್ಯವಿದೆಯೆಂದು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ಕೇಂದ್ರದ ನಿರ್ದೇಶಕರು Kingston University, ಲಂಡನ್‌ನಿಂದ 10 ವಿದ್ಯಾರ್ಥಿಗಳು 28 ದಿನಗಳ Practice Placement ಕಾರ್ಯಕ್ರಮ ಕೈಗೊಳ್ಳಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಲು ಅನುಮತಿ ಕೋರಿರುವುದನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ ಹಾಗೂ Kingston University ನಡುವೆ ಅಧ್ಯಾಪಕರು/ವಿದ್ಯಾರ್ಥಿಗಳ ಪರಸ್ಪರ ವಿನಿಮಯ ಕಾರ್ಯಕ್ರಮದಡಿ ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದ್ದು, ಈ ಒಡಂಬಡಿಕೆಯ ಅವಧಿಯು ದಿನಾಂಕ 31-8-2019ರಂದು ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ ಇದನ್ನು ನವೀಕರಿಸಲು ಹಾಗೂ Kingston University, ಲಂಡನ್‌ನಿಂದ 10 ವಿದ್ಯಾರ್ಥಿಗಳು 28 ದಿನಗಳ |

| | |
|---|---|
| | ಕಾರ್ಯಕ್ರಮ ಕೈಗೊಳ್ಳಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಲು ಅಂತರಾಷ್ಟ್ರೀಯ ಕೇಂದ್ರದ ನಿರ್ದೇಶಕರು ಅನುಮತಿ ಕೋರಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| ಇತರೆ ವಿಷಯಗಳು | |
|---|---|
| 1 | ಕುಲಸಚಿವ(ಪರೀಕ್ಷಾಂಗ)ರವರು Meta-I Technologies ಮತ್ತು Atom Technologies ಸಂಸ್ಥೆಯವರಿಂದ ಪದವಿ ಪ್ರವೇಶಾತಿ/ಪರೀಕ್ಷೆಗಳಲ್ಲಿ ತಾಂತ್ರಿಕ ದೋಷಗಳಿಂದ ವಿದ್ಯಾರ್ಥಿಗಳಿಗೆ ಆಗುತ್ತಿದ್ದ ತೊಂದರೆಗಳ ಬಗ್ಗೆ ವಿವರಣೆಯನ್ನು ನೀಡಿ, ದಂಡ ವಿಧಿಸಿರುವುದಾಗಿ ತಿಳಿಸಿದರು.<br>ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, Meta-I Technologies ಮತ್ತು Atom Technologies ಸಂಸ್ಥೆಯವರಿಂದ ಆಗಿರುವ ತಪ್ಪುಗಳಿಗೆ ದಂಡ ವಿಧಿಸಿರುವುದಾಗಿ ತಿಳಿಸಿದರೂ, ತಾವು ಸದರಿ ಸಂಸ್ಥೆಯವರಿಗೆ ಯಾವುದೇ ದಂಡ ವಿಧಿಸಿರುವುದಿಲ್ಲವೆಂದು ಬಲ್ಲ ಮೂಲಗಳಿಂದ ನಮಗೆ ಮಾಹಿತಿ ಬಂದಿರುತ್ತದೆ ಎಂದು ತಿಳಿಸಿದರು.<br>ಇದಕ್ಕೆ ಉತ್ತರವಾಗಿ ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ, ದಂಡ ವಸೂಲಾತಿಗೆ ಈಗಾಗಲೇ ಕ್ರಮ ತೆಗೆದುಕೊಂಡಿರುವ ಮಾಹಿತಿ ಹಾಗೂ ದಾಖಲಾತಿಗಳ ವಿವರಗಳನ್ನು ನೀಡುವುದಾಗಿ ತಿಳಿಸಿದರು.<br>ಡಾ. ಎಂ.ಎಸ್.ದಾಮೋದರ್‌ರವರು ಮಾತನಾಡಿ, ಸುಮಾರು 20–30 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರೂ ಅವರನ್ನು ಅನುತ್ತೀರ್ಣರಾಗಿರುವರೆಂದು ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಉತ್ತೀರ್ಣರಾಗಿರುತ್ತಾರೆಂದು ನಮೂದಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ ಆದುದರಿಂದ Meta-I Technologies ಸಂಸ್ಥೆಯವರಿಂದ ಆಗಿರುವ ತಪ್ಪುಗಳಿಗೆ ಸಂಬಂಧಪಟ್ಟಂತೆ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು. |
| 2 | ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಗೆ ಘನತೆಯಿದೆ ಎಂದು ಹೇಳುತ್ತೀರಾ, ನಮಗೆ ನಿಖರವಾದ ಮಾಹಿತಿ ಲಭ್ಯವಾಗುತ್ತಿಲ್ಲ. ಅಸ್ಪಷ್ಟವಾದ ಮಾಹಿತಿ ನಮಗೆ ಲಭ್ಯವಾಗುತ್ತಿದೆ, ತಾವು ನಮಗೆ ಕೊಡುವಂತಹ ಮಾಹಿತಿ ಆಧಾರದ ಮೇಲೆ ನಾವು ಚರ್ಚಿಸಿ ಒಪ್ಪಿಗೆ ಕೊಡುವುದು ಮಾಡುತ್ತೇವೆ. ನಮಗೆ ಪೂರ್ವಾಪರವೇನೂ ತಿಳಿದಿರುವುದೇ ಇಲ್ಲ, ಇಲ್ಲಿ ಬೇಕಾದಷ್ಟು ನ್ಯೂನತೆಗಳು ಎದ್ದು ಕಾಣುತ್ತಿವೆ ಕೆಲವು ವಿಷಯಗಳನ್ನು ತಕ್ಷಣಕ್ಕೆ ಕೊಡುತ್ತೀರ, ಆ ಸಮಯದಲ್ಲೆ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲವೆಂದು ತಿಳಿದರು. |
| 3 | ಡಾ. ಚೈತ್ರನಾರಾಯಣ್‌ರವರು ಮಾತನಾಡಿ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದಲ್ಲಿ ಯುಜಿಸಿಯ ನಿಯಮದಂತೆ ಯಾವುದೇ ಪಿ.ಎಚ್‌ಡಿ, ನೆಟ್, ಸ್ಲೆಟ್ ಅರ್ಹತೆಯನ್ನು ಹೊಂದದಿರುವ ಸಂತೋಷ್ ಹಾಗೂ ರಮ್ಯರವರು ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಮನವಿ ಮಾಡಿಕೊಂಡರು.<br>ಮಾನ್ಯ ಕುಲಪತಿಗಳು ಮಾತನಾಡಿ, ಅರ್ಹತೆ ಇರುವ ಅಧ್ಯಾಪಕರುಗಳು ಇದ್ದರೆ ಅವರ ವಿವರಗಳನ್ನು ಪತ್ರ ಮುಖೇನ ನೀಡಿದರೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು, |
| 4 | ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಅತಿಥಿ ಉಪನ್ಯಾಸಕರಿಗೆ ಬೇರೆ ವಿಶ್ವವಿದ್ಯಾನಿಯದಲ್ಲಿ ವೇತನ ಪರಿಷ್ಕರಿಸಲಾಗಿದೆ ಅದರಂತೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಿಗೂ ಸಹ ವೇತನವನ್ನು ಪರಿಷ್ಕರಿಸಬೇಕೆಂದು ಹಾಗೂ ಸದರಿ ವಿಷಯವನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಕ್ರಮಕೈಗೊಳ್ಳಬೇಕೆಂದು ಮಾನ್ಯ ಕುಲಪತಿಗಳಲ್ಲಿ ಮನವಿ ಮಾಡಿಕೊಂಡರು.<br>ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿಷಯದ ಬಗ್ಗೆ ಚರ್ಚಿಸಿ ಮುಂಬರುವ ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಲಾಗುವುದೆಂದು ತಿಳಿಸಿದರು. |
| 5 | **ಚೈತ್ರನಾರಾಯಣ್‌ರವರು ಮಾತನಾಡಿ,**<br>1. ಸ್ಕೂಲ್ ಆಫ್ ಲಾ ವಿಷಯದಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು, ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿರುವುದು ಕಂಡುಬಂದಿದ್ದು ಸದರಿ ವಿಷಯದ ಬಗ್ಗೆ ವಿದ್ಯಾರ್ಥಿಗಳಿಂದ ದೂರು ಬಂದಿರುತ್ತದೆ.<br>2. ಅಂಕಪಟ್ಟಿಗಳಲ್ಲಿ ವಿವಿಧ ರೀತಿಯಲ್ಲಿ ಶಿರೋನಾಮೆಯು (Nomenclature) ಮುದ್ರಿತವಾಗಿರುತ್ತದೆ. ಅದೇನೆಂದರೆ ಒಂದು ಅಂಕಪಟ್ಟಿಯಲ್ಲಿ "ಸ್ಕೂಲ್ ಆಫ್ ಲಾ", ಮತ್ತೊಂದು ಅಂಕಪಟ್ಟಿಯಲ್ಲಿ "ಸ್ಕೂಲ್ |

| | |
|---|---|
| | ಆಫ್ ಜಸ್ಟೀಸ್" ಎಂದು ಹಾಗೂ ಮತ್ತೊಂದು ಸಹಿ ಮಾಡುವ ಜಾಗದಲ್ಲಿ ಮೊಹರು ಕೂಡ ಬೇರೆ ರೀತಿ ಬಿಂಬಿಸುತ್ತಿದೆ. ಇಂತಹ ತಪ್ಪುಗಳು ಯಾರ ಅವಧಿಯಲ್ಲಾಯಿತು ಅನ್ನೋದು ಮುಖ್ಯವಲ್ಲ, ಸರಿಪಡಿಸುವುದು ಮುಖ್ಯ, ವಿದೇಶಿ ವಿದ್ಯಾರ್ಥಿಗಳು ಕೂಡ ಇರುತ್ತಾರೆ ವಿಶ್ವವಿದ್ಯಾನಿಲಯದಿಂದ ಪ್ರಮಾಣಪತ್ರ ಕೊಟ್ಟಾಗ ಅದು ನಕಲಿ ಪತ್ರಗಳಂತೆ ಕಾಣುತ್ತದೆ ಎಂದು ತಿಳಿಸಿದರು.<br>3. ಪರೀಕ್ಷೆಯಲ್ಲಿ 16–17 ಅಂಕಗಳನ್ನು ಪಡೆದುಕೊಂಡಿರುವವರು 3–4 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ, ಅವರ ಭವಿಷ್ಯ ಹಾಳಾಗಬಾರದೆಂದು ತಿಳಿಸಿದರು.<br>4. ವಿಭಾಗದ ಅಧ್ಯಕ್ಷರು ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ನನಗೆ ದೂರು ನೀಡಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.<br>**ಪ್ರೊ.ರಮೇಶ್‌ರವರು ಮಾತನಾಡಿ,**<br>ಸ್ಕೂಲ್ ಆಫ್ ಲಾ ವಿಷಯದಲ್ಲಿ ಅನುತ್ತೀರ್ಣ ಹೊಂದಿರುವ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿರುವುದು ಎಂಬ ವಿಷಯದ ಬಗ್ಗೆ ದೂರನ್ನು ಈಗಾಗಲೇ ನಾವು ಕುಲಸಚಿವ (ಪರೀಕ್ಷಾಂಗ) ರವರಿಗೆ ಪತ್ರ ಬರೆದಿರುತ್ತೇವೆ ಹಾಗೂ ಅವರು ಕ್ರಮಗಳನ್ನು ಸಹ ಕೈಗೊಂಡಿರುತ್ತಾರೆ. ಅಂಕಪಟ್ಟಿಗಳಲ್ಲಿ ಸ್ಕೂಲ್ ಆಫ್ ಲಾ, ಹಾಗೂ ಸ್ಕೂಲ್ ಆಫ್ ಜಸ್ಟೀಸ್ ಎಂದು ಬಗೆಬಗೆಯಲ್ಲಿ ಮುದ್ರಿತವಾಗಿರುವ ಗೊಂದಲಕ್ಕೆ ನಾವು ಈಗಾಗಲೇ ಕುಲಪತಿಗಳ ಜೊತೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿಸಿದರು ಹಾಗೂ ವಿಭಾಗದಲ್ಲಿ ಅಧ್ಯಕ್ಷರಾಗಿ ನಾನು ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪ್ರತಿಬಾರಿಯು ಸ್ಪಂದಿಸುತ್ತಿದ್ದೇನೆ ನನ್ನ ಕರ್ತವ್ಯವನ್ನು ನಾನು ಪ್ರಾಮಾಣಿಕತೆಯಿಂದ ಮಾಡುತ್ತಿದ್ದೇನೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ವಿಭಾಗದ ಅಧ್ಯಕ್ಷರಾದವರು ಅಂಕಪಟ್ಟಿಗಳು ಬಂದಾಗ ವಿದ್ಯಾರ್ಥಿಗಳಿಗೆ ವಿತರಿಸುವ ಮೊದಲು ಪರಿಶೀಲಿಸಿ, ನ್ಯೂನತೆಗಳಿದ್ದರೆ ಮುಂದಿನ ಕ್ರಮಕ್ಕಾಗಿ ಪರೀಕ್ಷಾ ವಿಭಾಗಕ್ಕೆ ಹಿಂದಿರುಗಿಸಿ ಕೊಡಬೇಕೆಂದು ತಿಳಿಸಿದರು.<br>ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ, ಪರೀಕ್ಷಾ ವಿಭಾಗದವರು ನಿಯಮಾನುಸಾರ ಯಾವ ಕೋರ್ಸ್, ಏನು ವಿಷಯ ಕೊಟ್ಟಿರುತ್ತಾರೆ ಅದೇ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಆದರೆ ಕಾನೂನು ವಿಭಾಗದ ಮೌಲ್ಯಮಾಪನವು ತುಂಬಾ ಅನಿಯಮಿತವಾಗಿರುತ್ತದೆ(Eratically), ಈ ಬಗ್ಗೆ ಕೆಲವು ವಿದ್ಯಾರ್ಥಿಗಳು ದೂರುಗಳನ್ನು ನೀಡಿರುತ್ತಾರೆ. ಒಬ್ಬ ವಿದ್ಯಾರ್ಥಿ ಮೊದಲನೆಯ ಮೌಲ್ಯಮಾಪನದಲ್ಲಿ 8–10 ಅಂಕಗಳನ್ನು ಪಡೆದಿರುತ್ತಾರೆ. Challenging Valuation ಗೆ ಮೌಲ್ಯಮಾಪನಕ್ಕೆ ಹಾಕಿದಾಗ 30–35 ಅಂಕಗಳನ್ನು ಬರುತ್ತದೆ, ಅಗ ನಾವು ಮತ್ತೆ ಮೂರನೇ ಮೌಲ್ಯಮಾಪನ ಮಾಡಿಸಬೇಕಾಗುತ್ತದೆ. (ನಿಯಮಗಳ ಪ್ರಕಾರ ಕಡಿಮೆ ಇರುವ 02 ಅಂಕಗಳ ಸರಾಸರಿ ಮಾಡಲು ಹೇಳುತ್ತದೆ 8–30 ಅಂಕಗಳು ಬಂದು ಸರಾಸರಿ ಮಾಡಿದರೆ ಮತ್ತೆ ಅನುತ್ತೀರ್ಣರಾಗುತ್ತಾರೆ) ಆದುದರಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಮಾನ್ಯ ಕುಲಪತಿಯವರ ಅನುಮತಿ ಮೇರೆಗೆ 4ನೇ ಬಾರಿ ಮೌಲ್ಯಮಾಪನ ಮಾಡಿಸಿರುವುದಾಗಿ ತಿಳಿಸಿದರು.<br>ಡಾ. ಈ.ಸಿ.ನಿಂಗರಾಜಗೌಡ ರವರು ಮಾತನಾಡಿ, ಬಾರ್ ಕೌನ್ಸಿಲ್‌ನ ಅನುಮತಿ ಇಲ್ಲದೆ ನಾವು ಬಿ.ಕಾಂ. ಎಲ್.ಎಲ್.ಬಿ ಕೋರ್ಸ್‌ನ್ನು ನಡೆಸುತ್ತಿದ್ದೇವೆ ಎಂದು ಸಭೆಗೆ ತಿಳಿಸಿದರು.<br>ಪ್ರೊ. ರಮೇಶ್ ರವರು ಮಾತನಾಡಿ, ಪ್ರೊ.ತಿಮ್ಮೇಗೌಡರವರೊಂದಿಗೆ ಈಗಾಗಲೇ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ತಮ್ಮ ಅಧ್ಯಕ್ಷತೆಯಲ್ಲೇ ಬಿ.ಕಾಂ. ಎಲ್.ಎಲ್.ಬಿ ಗೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿ ಅಲ್ಲಿಯ ಸಾಧಕ-ಬಾಧಕಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು. |
| 6 | ಡಾ. ಈ.ಸಿ ನಿಂಗರಾಜ್‌ಗೌಡರವರು ಮಾತನಾಡಿ, ಕಳೆದ ಮಹಿಳಾ ದಿನಾಚರಣೆಯ ಸಮಾರಂಭಕ್ಕೆ ಸಿಂಡಿಕೇಟ್‌ನ ಮಹಿಳಾ ಸದಸ್ಯರಾದ ಡಾ. ಚೈತ್ರನಾರಾಯಣ ಹಾಗೂ ಶ್ರೀಮತಿ ಪವಿತ್ರ.ವೈ.ಕೆ. ರವರನ್ನು ಆಹ್ವಾನಿಸಲಾಗಿತ್ತು. ಅದರಂತೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸಹ ಅತಿಥಿಗಳಾಗಿ ಆಹ್ವಾನಿಸಬೇಕೆಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರನ್ನು ಅತಿಥಿಗಳಾಗಿ ಆಹ್ವಾನಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |

| | |
|---|---|
| 7 | ವಸತಿ ನಿಲಯದ ಡೀನರನ್ನು ತೆಗೆದುಹಾಕಿರುವ ಬಗ್ಗೆಯೂ ಕೂಡ ಸಭೆಯಲ್ಲಿ ಚರ್ಚಿಸಲಾಯಿತು.<br>ಶ್ರೀ ದೊಡ್ಡಚಾರಿರವರು ಮಾತನಾಡಿ, ಅನಧಿಕೃತವಾಗಿ ವಸತಿಗೃಹದಲ್ಲಿ ವಾಸಮಾಡಿರುವವರ ವಿರುದ್ಧ ಕ್ರಮಕೈಗೊಂಡ ಡೀನರನ್ನು ತೆಗೆದುಹಾಕಿರುವುದು ನೋವಿನ ಸಂಗತಿ, ಹಾಗೂ ಅವರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಕಡಿಮೆಯಾಗಿರುವುದನ್ನು ಗಮನಿಸಿ ಕೂಡ ನಿರ್ದೇಶಕರನ್ನು ಬದಲಾವಣೆ ಮಾಡಿರುವುದು ಸಮಂಜಸವಲ್ಲ ಮತ್ತೆ ಅವರನ್ನೇ ನಿರ್ದೇಶಕರನ್ನಾಗಿ ಮಾಡಬೇಕೆಂದು ತಿಳಿಸಿದರು.<br>ಡಾ. ಎಂ.ಎಸ್.ದಾಮೋದರ್‌ರವರು ಮಾತನಾಡಿ, ವಸತಿ ನಿಲಯದ ಡೀನರನ್ನು ಆಯ್ಕೆ ಮಾಡುವಾಗ ಸಿಂಡಿಕೇಟ್ ಸಭೆಯ ಅನುಮತಿ ಪಡೆದಿರುವುದಿಲ್ಲ, ಹಾಗೂ ವಸತಿನಿಲಯದ ಡೀನರನ್ನಾಗಿ ಆಯ್ಕೆ ಮಾಡಿರುವವರು ಸಹ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಬೇಕಾಗಿದೆ ಎಂದರು.<br>ಡಾ. ಈ.ಸಿ.ನಿಂಗರಾಜ್‌ಗೌಡ ರವರು ಮಾತನಾಡಿ, ವಿವಾದಿತ ವ್ಯಕ್ತಿಗಳನ್ನು ವಸತಿನಿಲಯದ ಡೀನರನ್ನಾಗಿ ಮಾಡಿರುವುದು ಸಮಂಜಸವಲ್ಲ ಎಂದು ತಿಳಿಸಿದರು.<br>ಪ್ರೊ. ರಮೇಶ್‌ರವರು ಮಾತನಾಡಿ, ಈಗ ವಸತಿನಿಲಯದ ಡೀನ್ ಆಗಿ ಆಯ್ಕೆಯಾಗಿರುವ ವ್ಯಕ್ತಿಯು ವಿವಾದಿತ ವ್ಯಕ್ತಿಯಾಗಿರುವುದಿಲ್ಲ ಅವರು ಪ್ರಾಮಾಣಿಕರು ಎಂದು ತಿಳಿಸಿದರು.<br>ತನಿಖಾ ಹಂತದಲ್ಲಿರುವಾಗ ಸಮಿತಿಯ ಸದಸ್ಯರಾಗಿದ್ದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕರನ್ನು ಏಕಾಏಕಿ ಬದಲಾವಣೆ ಮಾಡಿರುವುದು ತಪ್ಪು, ಈ ಕೂಡಲೇ ಅವರನ್ನು ಮರು ನೇಮಕ ಮಾಡಬೇಕು ಹಾಗು ಯಾವುದೇ ಕಾರಣಕ್ಕೂ ಪರಿಪೂರ್ಣವಾಗಿ ಸಮಿತಿ ವರದಿ ನೀಡುವವರೆಗೂ ಬದಲಾವಣೆ ಮಾಡಬಾರದೆಂದು ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಒತ್ತಾಯಿಸಿದರು.<br>ಸಾಕಷ್ಟು ಚರ್ಚೆಗಳ ನಂತರ ಮಾನ್ಯ ಕುಲಪತಿಗಳು ಮಾತನಾಡಿ, ತಕ್ಷಣಕ್ಕೆ ವಸತಿನಿಲಯದ ಡೀನರನ್ನು ತೆಗೆದುಹಾಕುವುದು ಅಸಾಧ್ಯ, ಇದರ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| 8 | ಡಾ. ಎಂ.ಎಸ್.ದಾಮೋದರ್‌ರವರು ಮಾತನಾಡಿ, IOE ನಲ್ಲಿ ಸಂಯೋಜಕರನ್ನು ಬದಲಾವಣೆ ಮಾಡಬೇಕು ಹಾಗೂ IOE Adviser Committee ಗೆ ಸಿಂಡಿಕೇಟ್ ಸದಸ್ಯರನ್ನು ಕೂಡ ನೇಮಕ ಮಾಡಬೇಕಾಗಿ ಮಾನ್ಯ ಕುಲಪತಿಗಳಿಗೆ ಮನವಿ ಮಾಡಿಕೊಂಡರು. |
| 9 | ಮಾನ್ಯ ಹಣಕಾಸು ಅಧಿಕಾರಿಗಳು ಹಾಗೂ ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಅಧಿಕಾರಿಗಳ ಮನೆಗೆಲಸ ಮಾಡುವ ಸೇವಕರಿಗೆ ಭತ್ಯೆಯನ್ನು ಹೆಚ್ಚಿಸಬೇಕಾಗಿ ಸಭೆಗೆ ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ ಸದರಿ ವಿಷಯದ ಬಗ್ಗೆ ಕುಲಸಚಿವ, ಕುಲಸಚಿವ( ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಗಳು ಪತ್ರ ನೀಡಿದ್ದಲ್ಲಿ ಮುಂದಿನ ಸಿಂಡಿಕೇಟ್‌ನಲ್ಲಿ ವಿಷಯವನ್ನು ಪ್ರಸ್ತಾಪಿಸಲಾಗುವುದು ಎಂದು ತಿಳಿಸಿದರು. |
| 10 | ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಚಿನ್ನದ ಪದಕಗಳ ಖರೀಧಿ ಮಾಡಿದ ನಂತರ ಸ್ಟಾಕ್‌ಬುಕ್‌ನಲ್ಲಿ ಖರೀದಿಸಿದ ಸಂಸ್ಥೆ, ಎಷ್ಟು ಚಿನ್ನದ ಪದಕ ನೀಡಲಾಗಿದೆ, ಎಷ್ಟು ಬಾಕಿ ಉಳಿದಿದೆ ಎಂದು ಮಾಹಿತಿಯನ್ನು ದಾಖಲಾತಿ ಪುಸ್ತಕದಲ್ಲಿ ನಮೂದಿಸುವಂತೆ ನಿರ್ದೇಶನ ನೀಡಬೇಕಾಗಿ ಮನವಿ ಮಾಡಿಕೊಂಡರು. |
| 11 | ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಪ್ರೊ. ಉಮಾಕಾಂತ್‌ರವರಿಗೆ ಪದೋನ್ನತಿ ವಿಷಯದಲ್ಲಿ ಅನ್ಯಾಯವಾಗಿದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ.ಉಮಾಕಾಂತ್‌ರವರಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಯನ್ನು ಮತ್ತೊಮ್ಮೆ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.<br>ಡಾ. ಎಂ.ಎಸ್. ದಾಮೋದರ್‌ರವರು ಮಾತನಾಡಿ, 10ನೇ ಪ್ಲಾನ್‌ನಲ್ಲಿ ಪದೋನ್ನತಿ ಆಗಿರುವವರ ವಿರುದ್ಧ ಕ್ರಮಕೈಗೊಳ್ಳಲು ಸಾರ್ವಜನಿಕ ಲೆಕ್ಕಪರಿಶೋಧಕರು ತಿಳಿಸಿದರೂ ಸಹ ಕ್ರಮ ಕೈಗೊಂಡಿರುವುದಿಲ್ಲ ಈಗಾಗಲೇ 08 ಅಧ್ಯಾಪಕರುಗಳಿಗೆ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಲಾಗಿದೆ ಎಂದು ತಿಳಿಸಿದರು.<br>ಸಾಕಷ್ಟು ಚರ್ಚೆಗಳ ನಂತರ ಮಾನ್ಯ ಕುಲಪತಿಗಳು, ಒಂದು ಸಮಿತಿ ರಚಿಸಿ ಇದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |

| | |
|---|---|
| 12 | ಡಾ. ಕೆ.ವಿ.ಸುರೇಶ್‌ರವರು ಮಾತನಾಡಿ, ಬ್ಯಾಚುಲರ್ ಆಫ್ ಡೇಟಾ ಸೈನ್ಸ್ ಎಂಬ ಕೋರ್ಸ್ ಅನ್ನು ಯುಜಿಸಿಯಿಂದ ಅನುಮತಿ ಪಡೆದುಕೊಂಡು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭ ಮಾಡಬೇಕಾಗಿ ಮನವಿ ಮಾಡಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಬ್ಯಾಚುಲರ್ ಆಫ್ ಡೇಟಾ ಸೈನ್ಸ್ ಎಂಬ ಕೋರ್ಸ್ ಪ್ರಾರಂಭಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |
| 13 | ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ಜಿಲ್ಲಾ ಪಂಚಾಯಿತಿ, ಚಾಮರಾಜ ನಗರ ರವರ ವತಿಯಿಂದ ಸ್ನಾತಕೋತ್ತರ ಕೇಂದ್ರ, ಚಾಮರಾಜ ನಗರಕ್ಕೆ ಮುಖ್ಯ ರಸ್ತೆಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಪೈಪ್‌ಲೈನ್ ಅಳವಡಿಸಲು ಅಂದಾಜು ಮೊತ್ತ ಹತ್ತು ಲಕ್ಷರೂಪಾಯಿಗಳು ತಗಲುತ್ತದೆಂಬ Estimate ಅನ್ನು ತಮಗೆ ನೀಡಿರುತ್ತಾರೆ ಅದನ್ನು ಈ ಸಭೆಯು ಅನುಮೋದಿಸಿ ಕುಡಿಯುವ ನೀರಿನ ವ್ಯವಸ್ಥೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಇದಕುತ್ತರವಾಗಿ ಮಾನ್ಯ ಕುಲಪತಿಯವರು ಈಗಾಗಲೇ ತಾವು ಸದರಿ ವಿಷಯವನ್ನು ಅನುಮೋದಿಸಲಾಗಿದೆ ಎಂದು ಸಭೆಗೆ ತಿಳಿಸಿದರು. |
| 14 | ಜಂಟಿ ನಿರ್ದೇಶಕರು, ಮಾತನಾಡಿ, ಸರ್ಕಾರದ ಪ್ರತಿನಿಧಿಯಾಗಿರುವ ನನ್ನ ಆಸನ ಅಲ್ಲಿಂದಿಲ್ಲಿಗೆ ಬದಲಾವಣೆ ಮಾಡಲಾಗುತ್ತಿದೆ ಏಕೆ ಎಂದು ಪ್ರಶ್ನಿಸಿದರು. ಮುಂದುವರೆದು, ಯುವರಾಜ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊ. ರಾಜೇಶ್, ಜೀವ ರಸಾಯನ ಶಾಸ್ತ್ರ ~~ಅಧ್ಯಯನ~~ ವಿಭಾಗದವರನ್ನು ವಿಚಾರಣೆ ನಡೆಸಿದ್ದೀರಾ?, ಅವರ ನೇಮಕಾತಿ ಕಾನೂನು ಬಾಹಿರವಾಗಿದೆ ಎಂದು ಆರೋಪಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಪ್ರೊ. ರಾಜೇಶ್‌ರವರಿಗೆ ಸಂಬಂಧಿಸಿದ ಪ್ರಕರಣ ನ್ಯಾಯಾಲದಲ್ಲಿರುವುದರಿಂದ ತಾವು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಹಾಗೂ ಪತ್ರ ಮುಖೇನ ವಿಶ್ವವಿದ್ಯಾನಿಲಯಕ್ಕೆ ಬರೆಯುವಂತೆ ಜಂಟಿ ನಿರ್ದೇಶಕರಿಗೆ ಸೂಚಿಸಿದರು.<br>ಶ್ರೀಮತಿ ನಿರ್ಮಲ ಸೀತಾರಾಮನ್‌ರವರು, ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರದ ಶಂಕುಸ್ಥಾಪನೆಗೆ ಅತಿಥಿಗಳಾಗಿ ಆಗಮಿಸಿದ್ದ ಕಾರ್ಯಕ್ರಮಕ್ಕೆ ಸರ್ಕಾರದ ಪ್ರತಿನಿಧಿಯಾದ ನಮ್ಮನ್ನು ಆಹ್ವಾನಿಸಿಲ್ಲ ಎಂದು ಜಂಟಿ ನಿರ್ದೇಶಕರು ವಿಶ್ವವಿದ್ಯಾನಿಲಯದ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. |
| 15 | ಡಾ. ಈ.ಸಿ.ನಿಂಗರಾಜ್ ಗೌಡರವರು ಮಾತನಾಡಿ ವಿಶ್ವವಿದ್ಯಾನಿಲಯವು ಯಾವುದೇ ಸಂಘಟನೆ ಅಥವಾ ಒಕ್ಕೂಟದ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ನಡೆಸುವುದು ಸೂಕ್ತವಲ್ಲವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. |
| 16 | ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ರವರು ಮಾತನಾಡಿ ಸಿಂಡಿಕೇಟ್ ಸದಸ್ಯರ ಸ್ಥಾನಮಾನವೇನು? ಸಿಂಡಿಕೇಟ್ ಸದಸ್ಯರಿಗೆ ಸರಿಯಾದ ರೀತಿಯಲ್ಲಿ ಗೌರವ ನೀಡುತ್ತಿಲ್ಲ. ಅವರಿಗಿರುವ ನೈಜವಾದ ಸ್ಥಾನಮಾನದ ಬಗ್ಗೆ ಚರ್ಚೆಯಾಗಬೇಕೆಂದು ಒತ್ತಾಯಿಸಿದರು ಹಾಗೂ ಈ ಹಿಂದೆಯೂ ಎರಡು ವರ್ಷದಿಂದ ಯಾವುದೇ ಅತಿಥಿಗಳು ಬಂದರೂ ಸಿಂಡಿಕೇಟ್ ಸದಸ್ಯರನ್ನು ಪರಿಚಯಿಸುವಂತಹ ಪದ್ಧತಿ ರೂಢಿಸಿಕೊಳ್ಳದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮುಂದಿನ ದಿನಗಳಲ್ಲಿ ಅತಿಥಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಪರಿಚಯಿಸಲಾಗುವುದೆಂದು ತಿಳಿಸಿದರು. |
| 17 | ಡಾ. ಎಂ.ಎಸ್. ದಾಮೋದರ್ ರವರು ಮಾತನಾಡಿ, ಕೆಲವು ಅತಿಥಿ ಉಪನ್ಯಾಸಕರುಗಳು ಬೇರೆ ಬೇರೆ ಕಾಲೇಜುಗಳಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅಂತಹ ಉಪನ್ಯಾಸಕರುಗಳಿಗೆ ಎಚ್ಚರಿಕೆಯ ನೋಟಿಸ್ ನೀಡಬೇಕೆಂದು ತಿಳಿಸಿದರು. |
| 18 | ಡಾ. ಈ.ಸಿ.ನಿಂಗರಾಜ್ ಗೌಡರವರು ಮಾತನಾಡಿ ಯುವರಾಜ ಕಾಲೇಜಿನಲ್ಲಿರುವ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದ ಪ್ರಯೋಗಾಲಯಕ್ಕೆ ಸ್ಥಳ ಬೇಕಾಗಿದೆಯೆಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಲ್ಲಿಸಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು**